

ವ್ಯಾಪಕ ಪ್ರತಿಕ್ರಿಯೆ ಬರುತ್ತದೆ ಎಂದುಕೊಂಡಿರಲಿಲ್ಲ. ಇದು ಹೊಸ ತಂಡ. ನಿರ್ದೇಶಕರಿಗೆ ಕಿರುಚಿತ್ರ ಮಾಡಿದ ಅನುಭವ ಇತ್ತು. ಹೀರೊ ರಂಗಭೂಮಿ ಕಲಾವಿದ. ನಾನೂ ರಂಗಭೂಮಿಯವಳು. ಸಿನಿಮಾ ಅನುಭವ ನಮ್ಮಲ್ಲಿ ಯಾರಿಗೂ ಇರಲಿಲ್ಲ. ಎಲ್ಲರಿಗೂ ಮೊದಲ ಸಿನಿಮಾ ಆಗಿದ್ದರಿಂದ ಸಣ್ಣ ಹೊಗಳಿಕೆಯ ನಿರೀಕ್ಷೆ ಮಾತ್ರವಿತ್ತು. ಆದರೆ ಈಗ ಚಿತ್ರದಲ್ಲಿದ್ದ ಪ್ರತಿಯೊಬ್ಬರಿಗೂ ಮೆಚ್ಚುಗೆ ದೊರೆತಿದೆ. ಹೊಸ ಪ್ರತಿಭೆಗಳನ್ನು ಗುರುತಿಸಿರುವುದೇ ಖುಷಿ' ಎಂದು ಸಂತಸ ವ್ಯಕ್ತಪಡಿಸುತ್ತಾರೆ.

ಸಿನಿಮಾದಲ್ಲಿ ಮಲೆನಾಡಿನ ಮಲಯಾಳಿ ಹುಡುಗಿಯ ಪಾತ್ರ ನಿರ್ವಹಿಸಿರುವ ಅಶ್ವಿತಾ ಅವರಿಗೆ ತಮ್ಮ ಮೊದಲ ಸಿನಿಮಾದ ಪ್ರತಿ ಹಂತದಲ್ಲೂ ರಂಗಭೂಮಿಯ ಕಲಿಕೆ ಜೊತೆಯಾಗಿ ನಿಂತಿದೆ. ಸುಮಾರು ಮೂವತ್ತು ನಾಟಕಗಳಲ್ಲಿ ಅಭಿನಯಿಸಿರುವ, ನೂರಕ್ಕೂ ಹೆಚ್ಚು ನಾಟಕ ಪ್ರದರ್ಶನ ನೀಡಿರುವ ಅವರನ್ನು ಆ ಅನುಭವಗಳೇ ತಿದ್ದಿತೀಡಿವೆ.

ಅಶ್ವಿತಾ ಅವರ ಪ್ರತೀ ಮಾತಿನಲ್ಲೂ ರಂಗಭೂಮಿಯ ಸೆಳೆತ ಎದ್ದು ಕಾಣುತ್ತದೆ. 'ರಂಗಭೂಮಿ ನಟನೆಯನ್ನಷ್ಟೇ ಅಲ್ಲ, ಜೀವನವನ್ನೂ ಕಲಿಸುತ್ತದೆ. ಒಂದು ಕಲಾಪ್ರಕಾರವನ್ನು ದೇವರ ರೀತಿ ಪೂಜಿಸುವುದನ್ನು, ಆ ಕಲೆಯೇ ನಮ್ಮ ಸರ್ವಸ್ವ ಎಂಬಂತೆ ನಮ್ಮನ್ನು ನಾವು ಅರ್ಪಿಸಿಕೊಳ್ಳುವುದನ್ನು ಕಲಿಸುತ್ತದೆ. ಯಾವುದೇ ಕೆಲಸವನ್ನು ಶಿಸ್ತು, ಶ್ರದ್ಧೆಯಿಂದ ಮಾಡುವುದನ್ನು ಕಲಿಸುತ್ತದೆ. ಒಳ್ಳೆ ಆಲೋಚನೆ, ಫಲ ಸಿಗಲು ಅಷ್ಟೇ ಪರಿಶ್ರಮದ ಅಗತ್ಯವನ್ನೂ ಹೇಳಿಕೊಟ್ಟಿದೆ. ಯಾವುದೇ ಪಾತ್ರ ಮಾಡುವ ಮುನ್ನ ಅದರ ಬಗ್ಗೆ ತುಂಬಾ ತಿಳಿದುಕೊಳ್ಳಬೇಕೆನ್ನುವ ಸಂಶೋಧನಾ ಪ್ರವೃತ್ತಿ, ಒಗ್ಗಟ್ಟಿನ ಕೆಲಸದ ಸಾಮರ್ಥ್ಯವನ್ನು ರಂಗಭೂಮಿ ತೋರಿಸಿಕೊಟ್ಟಿದೆ' ಎನ್ನುತ್ತಾರೆ.

'ಒಂದು ತಂಡವಾಗಿ ಕೆಲಸ ಮಾಡುವಾಗ ಕಥೆಯ ಎಲ್ಲಾ ಪಾತ್ರಕ್ಕೂ ಪ್ರಾಮುಖ್ಯವಿರುತ್ತದೆ. ಎಲ್ಲವನ್ನೂ ಒಂದೇ ರೀತಿ ನೋಡುವ ಮನೋಭಾವವನ್ನು ರಂಗಭೂಮಿಯೇ ತುಂಬುತ್ತದೆ. ಪಾತ್ರ ಸಣ್ಣದಿದ್ದರೂ, ದೊಡ್ಡದಿದ್ದರೂ ಅದಕ್ಕೆ ಜೀವ ತುಂಬುವ ಕೆಲಸ ಮಾತ್ರ ನಮ್ಮದು. ಈ ಮಾತನ್ನು ಪ್ರತಿ ಬಾರಿಯೂ ನೆನಪಿಸಿಕೊಳ್ಳುತ್ತೇನೆ. 'ಕಂಬ್ಳಿಹುಳ' ಸಿನಿಮಾ ಆಯ್ಕೆಯಲ್ಲೂ ಈ ಮಾತು ನೆನಪಿಸಿಕೊಳ್ಳುವ ಸಂದರ್ಭ ಬಂತು. ಸಿನಿಮಾದಲ್ಲಿ ಹಲವು ಪಾತ್ರಗಳಿವೆ. ನಿನ್ನ ಪಾತ್ರಕ್ಕೆ ಮಹತ್ವ ಸಿಗದೇ ಹೋಗಬಹುದು. ನೀನು ಹೈಲೈಟ್ ಆಗದೇ ಇರಬಹುದು ಎಂದು ಹಲವರು ಹೇಳಿದರು. ಆದರೆ ನನಗೆ ಆ ರೀತಿಯ ಕಥೆಯೇ ಬೇಕಿತ್ತು. ಒಟ್ಟಾರೆ ಪ್ಯಾಕೇಜ್‌ನಂತಿರುವ ಕಥೆಯನ್ನು ನಾನು ಬಯಸುತ್ತಿದ್ದೆ. ಎಲ್ಲಾ ಪಾತ್ರಗಳಿಗೂ ಪ್ರಾಮುಖ್ಯ ಕೊಟ್ಟಾಗ ಕಥೆಯೂ ಗಟ್ಟಿಯಾಗಿರುತ್ತದೆ ಎಂಬುದನ್ನು ನಂಬಿದವಳು ನಾನು' ಎಂದು ಹೇಳುತ್ತಾರೆ.

ರಂಗಭೂಮಿ ಹಿನ್ನೆಲೆಯುಳ್ಳ ಕಾರಣಕ್ಕೆ ಪ್ರಯೋಗ ಎಂಬುದು ನಾನು ಬಯಸುವ ವಿಷಯವೇ ಆಗಿದೆ ಎನ್ನುವ ಅಶ್ವಿತಾ, ಪ್ರಾಯೋಗಿಕ ಪಾತ್ರಗಳಿಗೆ ಮನ್ನಣೆ ನೀಡುತ್ತಾರಂತೆ. ಎಲ್ಲಾ ರೀತಿಯ ಸಿನಿಮಾಗಳೊಂದಿಗೆ, ಅವರಿಗೆ ವೈಯಕ್ತಿಕವಾಗಿ ವಿಷಯಾಧಾರಿತ ಸಿನಿಮಾಗಳು ಆಪ್ತವೆನಿಸಿವೆ. ಸರಳ ಕಥೆ ಅಥವಾ ವಿಷಯವನ್ನಿಟ್ಟುಕೊಂಡು ದೊಡ್ಡ ಸಿದ್ಧಾಂತವನ್ನೇ ಬಿಡಿಸಿ ಹೇಳುವ, ಮನಸ್ಸಿಗೆ ಮುಟ್ಟುವಂಥ ಕಂಟೆಂಟ್ ಆಧರಿತ ಸಿನಿಮಾಗಳು ಇಷ್ಟವಿದ್ದು, ಅಂಥ ಸಿನಿಮಾಗಳಲ್ಲಿ ಅಭಿನಯಿಸುವ ಆಸೆಯನ್ನು ವ್ಯಕ್ತಪಡಿಸುತ್ತಾರೆ.

ಸದ್ಯ 'ಅಬ್ರಕಡಾಬ್ರ' ಸಿನಿಮಾದಲ್ಲಿ ನಟಿಸಿದ್ದು, ಅವಕಾಶ ಸಿಕ್ಕರೆ ತಮ್ಮಿಷ್ಟದ ನಟ ರಕ್ಷಿತ್ ಶೆಟ್ಟಿ ಜೊತೆ ಅಭಿನಯಿಸುವ ಅಥವಾ ಅವರ ನಿರ್ದೇಶನದ ಸಿನಿಮಾದಲ್ಲಿ ನಟಿಸುವ ಆಸೆ ಅವರಿಗಿದೆ. ಮುಂದೆ, ಸಿನಿಮಾ ಹಾಗೂ ಎಂಬಿಎ ಓದಿದ ಅನುಭವವನ್ನಿಟ್ಟುಕೊಂಡು 'ಸಿನಿಮಾ ಪ್ರೊಡಕ್ಷನ್ ಹೌಸ್' ನಿರ್ಮಿಸುವ ದೊಡ್ಡದೊಂದು ಕನಸೂ ಅವರಿಗಿದೆ.

ಪ್ರತಿಕ್ರಿಯಿಸಿ: feedback@sudha.co.in

# ಕಬ್ಜ
# ಕಾಮನಬಿಲ್ಲು!



ಕೊರೊನಾ ನಂತರದ ದಿನಗಳಲ್ಲಿ 'ಕೆಜಿಎಫ್ 2', 'ಕಾಂತಾರ' ಸಿನಿಮಾಗಳ ಮೂಲಕ ಶುರುವಾದ ಕನ್ನಡ ಚಿತ್ರರಂಗದ ಚೇತರಿಕೆಗೆ, ಪುನೀತ್ ರಾಜ್‌ಕುಮಾರ್ ನಟನೆ–ನಿರ್ಮಾಣದ 'ಗಂಧದಗುಡಿ' ಡಾಕ್ಯುಡ್ರಾಮಾ ಕೂಡ ದೊಡ್ಡ ಕೊಡುಗೆ ನೀಡಿದೆ. ಪ್ರೇಕ್ಷಕರನ್ನು ದೊಡ್ಡ ಸಂಖ್ಯೆಯಲ್ಲಿ ಚಿತ್ರಮಂದಿರಗಳಿಗೆ ಬರುವಂತೆ ಮಾಡಿರುವ ಈ ಚಿತ್ರಗಳ ನಂತರ ಗಾಂಧಿನಗರ ಕುತೂಹಲದಿಂದ ನಿರೀಕ್ಷಿಸುತ್ತಿರುವ ಮತ್ತೊಂದು ಸಿನಿಮಾ 'ಕಬ್ಜ'.

ಕನ್ನಡ ಚಿತ್ರೋದ್ಯಮ ಮಾತ್ರವಲ್ಲ, ನೆರೆಹೊರೆಯ ಚಿತ್ರರಂಗಗಳು ಕೂಡ 'ಕಬ್ಜ' ಬಗ್ಗೆ ದೃಷ್ಟಿಹರಿಸಿವೆ. ಕರ್ನಾಟಕದಾಚೆಗೂ ರೂಪುಗೊಂಡಿರುವ ಕನ್ನಡ ಸಿನಿಮಾಗಳ ಮಾರುಕಟ್ಟೆಯನ್ನು 'ಕಬ್ಜ' ಬಳಸಿಕೊಳ್ಳುವ ನಿರೀಕ್ಷೆಯಿದೆ.

'ಕಬ್ಜ' ಚಿತ್ರದ ಬಗ್ಗೆ ನಿರೀಕ್ಷೆ ಹುಟ್ಟಲಿಕ್ಕೆ ಕಾರಣಗಳಿವೆ. ಉಪೇಂದ್ರ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಸುದೀಪ್ ಕೂಡ ಮುಖ್ಯ ಪಾತ್ರವೊಂದರಲ್ಲಿ ನಟಿಸಿದ್ದಾರೆ. ಇಬ್ಬರೂ ನಾಯಕನಟರು ಕರ್ನಾಟಕದಾಚೆಗೂ ತಮ್ಮ ವರ್ಚಸ್ಸನ್ನು ರೂಪಿಸಿಕೊಂಡಿರುವವರು. ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿದ್ದು, ಡಿಸೆಂಬರ್‌ನಲ್ಲಿ ಸಿನಿಮಾದ ಬಿಡುಗಡೆಗೆ ಸಿದ್ಧತೆ ಆರಂಭವಾಗಿದೆ.

ನಿರ್ದೇಶಕ ಆರ್. ಚಂದ್ರು ಅವರಿಗೆ 'ಕಬ್ಜ' ಮಹತ್ವಾಕಾಂಕ್ಷೆಯ ಸಿನಿಮಾ. ಶ್ರಿಯಾ ಶರಣ್, ಕಬೀರ್ ಸಿಂಗ್, ಪ್ರಮೋದ್ ಶೆಟ್ಟಿ ಸೇರಿದಂತೆ ವಿವಿಧ ಭಾಷೆಗಳ ಪ್ರಸಿದ್ಧ ಕಲಾವಿದರನ್ನು ಅವರು ಕಲೆಹಾಕಿದ್ದಾರೆ. ಕನ್ನಡ ಮಾತ್ರವಲ್ಲದೆ – ತೆಲುಗು, ತಮಿಳು, ಮಲಯಾಳಂ, ಹಿಂದಿ, ಮರಾಠಿ, ಬೆಂಗಾಲಿ ಭಾಷೆಗಳಲ್ಲಿಯೂ 'ಕಬ್ಜ' ತೆರೆಕಾಣಲಿದೆ. ಕನ್ನಡ ಚಿತ್ರವೊಂದು ಒಮ್ಮೆಗೇ ಏಳು ಭಾಷೆಗಳಲ್ಲಿ ತೆರೆಕಾಣುತ್ತಿರುವುದು ಇದೇ ಮೊದಲು. 'ಕಬ್ಜಾ ಹಾಲಿವುಡ್ ಗುಣಮಟ್ಟದಲ್ಲಿ ತಯಾರಾಗಿರುವ ಸಿನಿಮಾ. ಇದು ಚಿತ್ರರಸಿಕರ ಮನಸ್ಸಿನಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಲಿದೆ' ಎಂದು ಎಂದು ಚಂದ್ರು ತಿಳಿಸಿದ್ದಾರೆ.